## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ವಿರಾಜಪೇಟೆ

***ಸಿ.ಸಿ. ಸಂಖ್ಯೆ : 947/2021***

***ಚಾಸಾ : 2***

***ಪ್ರಾಸಾ : 2***

| | | |
|---|---|---|
| **ಹೆಸರು** | : | ಸಿ ಸಬಾಸ್ಟಿನ್ |
| **ತಂದೆಯ ಹೆಸರು** | : | ಜೇವಿಯರ್ |
| **ವಯಸ್ಸು** | : | 37 ವರ್ಷ |
| **ಉದ್ಯೋಗ** | : | ವ್ಯಾಪಾರ |
| **ವಾಸಸ್ಥಳ** | : | ಬಾಡಗ ಬಾಣಾಂಗಾಲ, ಸಿದ್ದಾಪುರ |

### ದಿನಾಂಕ : *26-07-2023* ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

***ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ. ರವರಿಂದ.***

ಚಾಸಾ-1 ನನ್ನ ತಂದೆ. ಚಾಸಾ-3 ನನ್ನ ತಮ್ಮ. ಚಾಸಾ4 ಹಾಗೂ 5 ರವರ ಪರಿಚಯವಿರುತ್ತದೆ. ದಿನಾಂಕ 12-05-2021 ರಂದು ನಮ್ಮ ಹಸವನ್ನು ಮೇಯಲು ಗದ್ದೆಗೆ ಬಿಟ್ಟಿದ್ದು, ಮಾಮುಲಾಗಿ ಅದು ಸಂಜೆ 5 ರಿಂದ 6 ಗಂಟೆ ಸಮಯದಲ್ಲಿ ಅದು ಮನೆಗೆ ಹಿಂತಿರುಗಿತ್ತಿದ್ದು, ಆದರೆ ಸದರಿ ದಿನಂದು ಅದು ಬಾರದ ಕಾರಣ ನಾನು, ನನ್ನ ತಂದೆಯಾದ ಚಾಸಾ-1 ಹಾಗೂ ನನ್ನ ತಮ್ಮನಾದ ಚಾಸಾ-3 ರವರು ಅದನ್ನು ಹುಡುಕಿಕೊಂಡು ಹೋಗಿದ್ದು, ಆದರೆ ಸದರಿ ದಿನ ನಮಗೆ ಹಸುವು ಸಿಕ್ಕಿರುವುದಿಲ್ಲ. ನಂತರ ಮರುದಿನ ಬೆಳಿಗ್ಗೆ ನಾನು, ನನ್ನ ತಂದೆಯಾದ ಚಾಸಾ-1 ಹಾಗೂ ನನ್ನ ತಮ್ಮನಾದ ಚಾಸಾ-3 ರವರು ಹಸುವನ್ನು ಹುಡುಕಿಕೊಂಡು ಪುನಃ ನಮ್ಮ ಮನೆಯ ಪಕ್ಕದಲ್ಲಿದ್ದ ಬಿಬಿಟಿಸಿ ಕಂಪನಿಗೆ ಸೇರಿದ ತೋಟದ ಹತ್ತಿರ ಹೋದಾಗ ಅಲ್ಲಿ ರಕ್ತದ ಕಲೆಗಳು ಇರುವುದು ಕಂಡು ಬಂದಿರುತ್ತದೆ. ನಂತರ ನಾವು ಮುಂದೆ ಹೋಗಿ ನೋಡಲಾಗಿ, ಅಲ್ಲಿ ನಮ್ಮ ಹಸುವಿನ ಚರ್ಮ ಹಾಗೂ ಕರಳು ಇರುವುದು ಕಂಡು ಬಂದಿರುತ್ತದೆ. ಸದರಿ ಹಸುವಿನ ಚರ್ಮವನ್ನು ನೋಡಿ ಅದು ನಮ್ಮ ಹಸುವೇ ಎಂದು ಖಾತರಿ ಮಾಡಿಕೊಂಡಿರುತ್ತೇವೆ. ನಂತರ ನಾವು ಪೋಲಿಸರಿಗೆ ದೂರನ್ನು ನೀಡಿದ್ದು, ನಂತರ ಪೋಲಿಸರು ಸ್ಥಳಕ್ಕೆ ಬಂದು ಪರಿಶೀಲಿಸಿ, ಅಲ್ಲಿ ಮಹಜರ ಕ್ರಮ ಜರುಗಿಸಿ, ನಂತರ ಅಲ್ಲಿ ಸಿಕ್ಕಿದ ಹಸುವಿನ ಚರ್ಮ ಹಾಗೂ ಕರುಳನ್ನು ಅಲ್ಲಿಯೇ ಹೂತು ಹಾಕಲಾಯಿತು. ನಂತರ ದಿನಾಂಕ 16-05-2021 ರಂದು ಪೋಲಿಸರು ಆರೋಪಿಗಳನ್ನು ತೋರಿಸಿ, ಅವರುಗಳೇ ನಮ್ಮ ಹಸುವನ್ನು ಕೊಂದಿರುವುದಾಗಿ

ತಿಳಿಸಿರುತ್ತಾರೆ. ನಂತರ ಪೋಲಿಸರು ಅದೇ ದಿನ ಆರೋಪಿಗಳ ಮನೆಗೆ ಹೋಗಿ ಅವರುಗಳು ಕೃತ್ಯಕ್ಕೆ ಬಳಸಿದ ಆಯುಧಗಳನ್ನು ಹಾಗೂ ಸಾಗಿಸಲು ಬಳಸಿದ ಬುಲೆರೋ ಪಿಕಪ್ ವಾಹನವನ್ನು ಪೋಲಿಸರು ತೆಗೆದುಕೊಂಡು ಹೋಗಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ 2 ಹಾಗೂ 3 ನೇ ಆರೋಪಿಗಳನ್ನು ನೋಡಿ ಗುರುತಿಸುತ್ತಾರೆ. *1, 4* ಹಾಗೂ *5* ನೇ ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ. *1, 4* ಹಾಗೂ *5* ನೇ ಆರೋಪಿಗಳು ಗೈರು ಹಾಜರಾಗಿದ್ದು, ಆರೋಪಿಗಳ ಪರ ವಕೀಲರು ಅವರುಗಳ ಹಾಜರಾತಿ ವಿನಾಯಿತಿಯನ್ನು ಅರ್ಜಿ ಸಲ್ಲಿಸಿದ್ದು ಸದರಿ ಆರೋಪಿಗಳ ಗುರುತಿಸುವಿಕೆಯ ಬಗ್ಗೆ ತಕರಾರು ಇರುವುದಿಲ್ಲವೆಂದು ಪರಿಗಣಿಸಲಾಯಿತು.

ಈ ಹಂತದಲ್ಲಿ ಮಾನ್ಯ ಸ. ಸ. ಅ. ವಶಪಡಿಸಿಕೊಂಡ ಮು. ಮಾ ಗಳನ್ನು ಗುರುತಿಸುವ ಸಲುವಾಗಿ ಸಮಯಾವಕಾಶವನ್ನು ಕೋರಿದ್ದು, ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶವನ್ನು ನೀಡಿ ಮುಂದೂಲಾಯಿತು.

ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿದೆ.

ಓ. ಹೇ. ಕೇ. ಸ. ಇದೆ. ಸಹಿ/-

**(ಸಂತೋಷ ಕೊಠಾರಿ)**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ. ವಿರಾಜಪೇಟೆ.